**<u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>**

**Ref**: 7/2024

ಎಂ.ಡಬ್ಲ್ಯೂ– 1

**<u>ದಿನಾಂಕ 05.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಲ್.ಎಂ.ಪಿ. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಸುಮಾರು 2 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈಗ ಸದರಿ ಸಂಸ್ಥೆಯನ್ನು Reid & Taylor international Private Ltd. ಎಂದು ಕರೆಯುತ್ತೇವೆ ಎಂದರೆ ಸರಿ. ಸದರಿ Reid & Taylor ಸಂಸ್ಥೆಯು 1999 ರಲ್ಲಿ ಸ್ಥಾಪನೆಗೊಂಡಿತ್ತು ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ ಸುಮಾರು 800 ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಂಸ್ಥೆಯು ಸಿ.ಐ.ಟಿ.ಯೂ. ಗೆ ಸಂಯೋಜನೆಗೊಂಡಿತ್ತು ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ ಸಾಲಗಳು ಹೆಚ್ಚಾಗಿ ಇದ್ದ ಕಾರಣ ಎನ್.ಸಿ.ಎಲ್.ಟಿ. ಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.

ಎನ್.ಸಿ.ಎಲ್.ಟಿ. ಗೆ ಅರ್ಜಿ ಸಲ್ಲಿಸುವುದಕ್ಕೆ ಮುಂಚೆ ಸಂಸ್ಥೆಯವರು ಬಿ.ಐ.ಎಫ್.ಆರ್. ಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2018 ರಲ್ಲಿ ಎನ್.ಸಿ.ಎಲ್.ಟಿ. ಯವರು ವೆಂಕಟೇಶನ್ ಶಂಕರ್ ನಾರಾಯಣ್ ಎನ್ನುವಂತ ವ್ಯಕ್ತಿಯನ್ನು Resolution professional ಆಗಿ ನೇಮಕ ಮಾಡಿದ ಬಗ್ಗೆ ಅರಿವು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. Resolution plans ಗಳು ಯಾವುದೇ ಬರದೆ ಇದ್ದರಿಂದ 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯ liquidation ಪ್ರಕ್ರಿಯೇಗಳನ್ನು ನಿರ್ವಹಿಸಲು ಶ್ರೀ.ರವಿ ಶಂಕರ್ ದೇವರ್ ಕೊಂಡ ಎಂಬುವವರನ್ನು ನೇಮಕ ಮಾಡಿರುವ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ.

ಸದರಿ liquidation ಪ್ರಕ್ರಿಯೇಗಳನ್ನು ಕೈಗೊಳ್ಳುವಾಗ 2 ನೇ ಪಕ್ಷಗಾರರ ಸಂಖ್ಯೆ–1 ರವರು going concern ಆಗಿ ಮುಂದುವರಿಸಲು ಆದೇಶ ಮಾಡಿರುವುದರ ಬಗ್ಗೆ ನನಗೆ

ಅರಿವು ಇರುತ್ತದೆ. ಅದು ಆದೇಶ ಮಾಡುವಾಗ Finquest financial solutions ರವರು ಸಾಲಗಾರರಾಗಿದ್ದ ಬಗ್ಗೆ ನನಗೆ ಅರಿವು ಇರುತ್ತದೆ. ಎನ್.ಸಿ.ಎಲ್.ಟಿ. ಪ್ರಕ್ರಿಯೇಯಲ್ಲಿ Finquest financial solutions ರವರು ಕೂಡ ಒಬ್ಬರು ಅರ್ಜಿದಾರರು ಎಂದರೆ ಅದರ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿಯಲ್ಲ.

Finquest financial solutions ರವರು ಎನ್.ಸಿ.ಎಲ್.ಟಿ. ಮುಂದು ಅರ್ಜಿ ಸಲ್ಲಿಸಿ ನಮಗೆ ಮೊದಲನೇ ಆದ್ಯತೆ ಇರುತ್ತದೆ ಎಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. Finquest financial solutions ರವರು ಎನ್.ಸಿ.ಎಲ್.ಟಿ. ಮುಂದು 2 ನೇ ಪಕ್ಷಗಾರರ ಸಂಖ್ಯೆ–2 ರವರ ಮುಖೇನ ಸಂಸ್ಥೆಯನ್ನು ಮುಂದುವರಿಸುವಾಗ ಸಲ್ಲಿಕೆಗಳನ್ನು ಮಾಡಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಅರಿವಿಲ್ಲ ಎನ್ನುತ್ತಾರೆ. ಎನ್.ಸಿ.ಎಲ್.ಟಿ. liquidation ಆದೇಶ ಮಾಡುವಾಗ 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯ ಹಾಲಿ ಕಾರ್ಮಿಕರನ್ನು ರಕ್ಷಿಸಬೇಕು ಎಂದು ಆದೇಶ ಮಾಡಿರುವ ಬಗ್ಗೆ ನನಗೆ ಅರಿವು ಇರುತ್ತದೆ.

Finquest financial solutions ಹಾಗೂ 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆ ನಡುವೆ ಒಂದು ಒಡಂಬಡಿಕೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಜೂನ್ ತಿಂಗಳಿನಲ್ಲಿ ರವಿ ಶಂಕರ್ ದೇವಕೊಂಡ ಹಾಗೂ Finquest financial solutions ನಡುವೆ ಒಂದು ಕ್ರಯ ಪತ್ರ ಆಗಿತ್ತು ಎಂದರೆ ನನಗೆ ಅರಿವು ಇಲ್ಲ. 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯನ್ನು ಮುಂದುವರೆಸುವ ಸಲುವಾಗಿ 2 ನೇ ಪಕ್ಷಗಾರರ ಸಂಖ್ಯೆ–2 ರವರ ಸಂಸ್ಥೆಯನ್ನು Finquest financial solutions ರವರು ಸೃಷ್ಟಿ ಮಾಡಿದ್ದರು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ–2 ರವರ ಸಂಸ್ಥೆಯು 2020 ನವೆಂಬರ್ ನಿಂದ ಸ್ಥಾಪನೆಗೊಂಡಿರುತ್ತದೆ. 2 ನೇ ಪಕ್ಷಗಾರರ ಸಂಖ್ಯೆ–2 ರವರ ಸಂಸ್ಥೆಯನ್ನು Finquest financial solutions ರವರು ಸ್ಥಾಪನೆ ಮಾಡಿದ್ದರು ಎಂದರೆ ಸರಿ.

1 ನೇ ಪಕ್ಷಗಾರರು 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ. ದಿನಾಂಕಃ14.05.2020 ರಂದು 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯ Official liquidator ರವರು 1 ನೇ ಪಕ್ಷಗಾರರನ್ನು ಒಳಗೊಂಡಂತೆ ಸುಮಾರು 800 ಕಾರ್ಮಿಕರನ್ನು discharge ಮಾಡಿದ್ದರು ಎಂದರೆ ಸರಿ. 2019 ನೇ ಇಸವಿಯಲ್ಲಿ ಎನ್.ಸಿ.ಎಲ್.ಟಿ. 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯನ್ನು liquidation on going concern ಆಗಿ ಆದೇಶ ಮಾಡಿದ ದಿನಾಂಕದಿಂದ 14.05.2020 ರವರೆಗೂ ಸಂಸ್ಥೆಯನು ನಡೆಸಿಕೊಂಡು ಹೋಗುತ್ತಿದ್ದುದರ ಬಗ್ಗೆ ನನಗೆ ಅರಿವು ಇರುತ್ತದೆ.

**ಈ ಹಂತದಲ್ಲಿ ಶ್ರೀ.ಎಲ್.ಎಂ.ಪಿ. ವಕೀಲರು ಸಾಕ್ಷಿಯ ಮುದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**